# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 795
2. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 26.12.2022
4. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಾಲೇಜು ವಿದ್ಯಾರ್ಥಿಗಳು ಹಾಗೂ ಕಂಪನಿ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ಡ್ರಗ್ಸ್ ಮಾರಾಟ ದಂಧೆ ನಿಯಂತ್ರಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ: | ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ, ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸಿರುವ, ಮಾದಕ ವಸ್ತುಗಳ ಸೇವನೆ ಹಾಗೂ ಮಾದಕ ವಸ್ತುಗಳನ್ನು ಅಕ್ರಮವಾಗಿ ಹೊಂದಿರುವವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ರಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾದಕ ದ್ರವ್ಯ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:<br><br>➢ ವಿವಿಧ ಸಾಮಾಜಿಕ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮಾದಕ ದ್ರವ್ಯ ವಿರೋಧಿ ದಿನಾಚರಣೆಯನ್ನು ಆಚರಿಸುವುದರೊಂದಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ಕಾರ್ಯಕ್ರಮಗಳನ್ನು, ಮಾಹಿತಿ ಕಾರ್ಯಗಾರಗಳನ್ನು ಆಯೋಜಿಸುವ ಮೂಲಕ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಬೀಟ್ ಸಿಬ್ಬಂದಿಗಳು ತಮ್ಮ ಬೀಟ್ ಸಭೆಗಳಲ್ಲಿ ಮಾದಕ ದ್ರವ್ಯದ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಹೇಳಿ, ಮಾರಾಟ ಮಾಡುವವರ ಅಥವಾ ಮಾದಕ ವಸ್ತುಗಳನ್ನು ಹೊಂದಿರುವವರ ಬಗ್ಗೆ ಗುಪ್ತ ಮಾಹಿತಿಯನ್ನು ಕಲೆಹಾಕುವಂತೆ ಸೂಚಿಸಲಾಗಿದೆ. |

| | | |
|---|---|---|
| | | ➢ ಸಾಮಾಜಿಕ ಜಾಲತಾಣಗಳಲ್ಲಿ ಮಾದಕ ದ್ರವ್ಯದ ದುಷ್ಪರಿಣಾಮಗಳ ಕುರಿತು ಮತ್ತು ಮಾದಕ ದ್ರವ್ಯಗಳನ್ನು ಬಳಸದಂತೆ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲಾಗುತ್ತಿದೆ. |
| (ಆ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2020 ರಿಂದ ಇಲ್ಲಿಯವರೆಗೆ ನಡೆಸಿದ ಕಾರ್ಯಾಚರಣೆಗಳೆಷ್ಟು; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 2020, 2021, 2022 ನವೆಂಬರ್-30ರವರೆಗೆ ಕಾರ್ಯಾಚರಣೆ ನಡೆಸಿ, ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ.<br><br>ವರ್ಷ — ದಾಖಲಿಸಿದ ಪ್ರಕರಣಗಳು<br>2019 — 17<br>2020 — 28<br>2021 — 9<br>2022 — 32 |
| (ಇ) | ಒಟ್ಟು ಬಂಧಿತರ ಸಂಖ್ಯೆ ಎಷ್ಟು; ಶಿಕ್ಷೆಗೊಳಗಾದ ಪ್ರಕರಣಗಳೇನಾದರೂ ಇವೆಯೇ; ಇದ್ದಲ್ಲಿ ವಿವರ ನೀಡುವುದು? | ದಾಖಲಿಸಿದ ಪ್ರಕರಣಗಳಲ್ಲಿ ಬಂಧಿತರ ಸಂಖ್ಯೆ ಹಾಗೂ ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ ಹಾಗೂ ಇತರೆ ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ. |

ಒಇ 35 ಪಿಎನ್‌ಡಿ 2022(ಇ)

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳಲ್ಲಿ ದಸ್ತಗಿರಿ ಮಾಡಿದ ಆರೋಪಿಗಳ ಸಂಖ್ಯೆ, ವಶಪಡಿಸಿಕೊಂಡ ಮಾಲುಗಳು ಹಾಗೂ ಶಿಕ್ಷೆಯಾದ ಪ್ರಕರಣಗಳು ಮತ್ತು ಶಿಕ್ಷೆಗೊಳಗಾದವರ ಸಂಖ್ಯೆಯ ವಿವರಗಳು:**

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಒಟ್ಟು ಆರೋಪಿಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ಮಾದಕ ದ್ರವ್ಯಗಳ ವಿವರ ಮತ್ತು ಪ್ರಮಾಣ | ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ | ಶಿಕ್ಷೆಯಾದ ಆರೋಪಿಗಳ ಸಂಖ್ಯೆ |
|---|---|---|---|---|---|---|
| 2019 | 17 | 22 | 22 | ಗಾಂಜಾ 6 ಕೆ.ಜಿ 9 ಗ್ರಾಂ | 3 | 5 |
| 2020 | 28 | 56 | 55 | ಗಾಂಜಾ 251 ಕೆ.ಜಿ 165 ಗ್ರಾಂ ಮತ್ತು ಆಶಿಶ್ ಆಯಿಲ್ 350 ಗ್ರಾಂ | 7 | 8 |
| 2021 | 9 | 20 | 20 | ಗಾಂಜಾ 11 ಕೆ.ಜಿ 949 ಗ್ರಾಂ ಮತ್ತು ಆಶಿಶ್ ಆಯಿಲ್ 350 ಗ್ರಾಂ, ಎಂ.ಡಿ.ಎಂ.ಎ 3.19 ಗ್ರಾಂ ಎಲ್.ಎಸ್.ಡಿ 1.20 ಗ್ರಾಂ | – | – |
| 2022 (ನವೆಂಬರ್ 30 ರ ವರೆಗೆ) | 32 | 49 | 49 | ಗಾಂಜಾ 6 ಕೆ.ಜಿ 22 ಗ್ರಾಂ ಮತ್ತು ಎಂ.ಡಿ.ಎಂ.ಎ 3 ಗ್ರಾಂ | 8 | 11 |